ಸಹಕಾರಿ ಸಂಕೀರ್ಣ ಕಟ್ಟಡ ಉದ್ಘಾಟನೆ

# ಧರ್ಮದ ತಳಹದಿಯ ಸುಖ ಶಾಶ್ವತ: ಸ್ವಾಮೀಜಿ

ಯಲ್ಲಾಪುರ: 'ಅಧರ್ಮದಿಂದ ಬೇಗ ಸುಖ ಸಿಗುತ್ತದೆ ಎಂಬ ಭ್ರಮೆಯಲ್ಲಿ ಜನರು ಅಧರ್ಮದೆಡೆಗೆ ವಾಲುತ್ತಿದ್ದಾರೆ. ಆದರೆ ಇದು ಕ್ಷಣಿಕ ಸುಖವಾಗಿದೆ. ಧರ್ಮದ ತಳಹದಿಯ ಮೇಲೆ ಅರ್ಹತೆಯ ಮೇಲೆ ಪಡೆವ ಸುಖವೇ ಶಾಶ್ವತ ಸುಖವಾಗಿದೆ' ಎಂದು ಸೋಂದಾ ಸ್ವರ್ಣವಲ್ಲಿ ಮಠಾಧೀಶ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ನುಡಿದರು.

ಪಟ್ಟಣದ ಸಬಗೇರಿಯಲ್ಲಿ ಶನಿವಾರ ಸಂಜೆ ಯಲ್ಲಾಪುರ ಪ್ರಾಥಮಿಕ ಪತ್ತಿನ ವ್ಯವಸಾಯ ಸಹಕಾರಿ ಸಂಘದ ಆವರಣದಲ್ಲಿ ನೂತನವಾಗಿ ನಿರ್ಮಿಸಲಾದ ಸಹಕಾರಿ ಸಂಕೀರ್ಣ ಕಟ್ಟಡವನ್ನು ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು. 'ಮನುಷ್ಯನಿಗೆ ವಿದ್ಯೆಯಿಂದ ವಿನಯ, ವಿನಯದಿಂದ ಅರ್ಹತೆ, ಅರ್ಹತೆಯಿಂದ ಹಣ, ಆ ಹಣದಿಂದ ಧರ್ಮದ ಮೂಲಕ ಸುಖ ದೊರೆಯುತ್ತದೆ. ಯಾರಿಗೆ ಸದ್ಗುಣಗಳು ಇರುತ್ತವೆಯೋ ಅವನಿಗೆ ಅರ್ಹತೆ ಬರುತ್ತದೆ. ಜನರು ಅವನ ಮೇಲೆ ವಿಶ್ವಾಸವಿಡುತ್ತಾರೆ' ಎಂದರು.



ಯಲ್ಲಾಪುರ ಪಟ್ಟಣದ ಸಬಗೇರಿಯಲ್ಲಿ ನಡೆದ 'ಸಹಕಾರಿ ಸಂಕೀರ್ಣ' ಕಟ್ಟಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಸೋಂದಾ ಸ್ವರ್ಣವಲ್ಲೀ ಮಠಾಧೀಶ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಆಶೀರ್ವಚನ ನೀಡಿದರು

ಅಧ್ಯಕ್ಷತೆ ವಹಿಸಿದ್ದ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ ಮಾತನಾಡಿ, 'ಎಲ್ಲಿಯವರೆಗೆ ಸಹಕಾರಿ ಸಂಸ್ಥೆ ಜೀವಂತವಾಗಿರುತ್ತದೆ. ಜಿಲ್ಲೆಯ ರೈತರ ಬೆಳವಣಿಗೆಯಲ್ಲಿ ಸಹಕಾರಿ ಸಂಸ್ಥೆಗಳ ಪಾತ್ರ ಬಹಳ ಮುಖ್ಯ' ಎಂದರು.

ಟಿ.ಎಂ.ಎಸ್ ಅಧ್ಯಕ್ಷ ಎನ್.ಕೆ.ಭಟ್ಟ ಅಗ್ಗಾಶಿಕುಂಬ್ರಿ, 'ರೈತರೊಂದಿಗೆ ಇನ್ನಿತರ ಗ್ರಾಹಕರು ವ್ಯವಹಾರ ನಡೆಸಿದಾಗ ಸಹಕಾರ ಸಂಘಗಳ ಅಭಿವೃದ್ಧಿ ಸಾಧ್ಯ. ಎಲ್ಲ ಸದಸ್ಯರು ಸಹಕಾರ ನೀಡಿದಾಗ ಸಹಕಾರಿ ಸಂಸ್ಥೆ ಬೆಳೆಯುತ್ತದೆ' ಎಂದರು.

ಉಪಾಧ್ಯಕ್ಷ ಟಿ.ಆರ್.ಹೆಗಡೆ ತೊಂಡೇಕೆರೆ, ಶಿರಸಿಯ ಟಿ.ಎಸ್.ಎಸ್ ಕಾರ್ಯಾಧ್ಯಕ್ಷ ರಾಮಕೃಷ್ಣ ಹೆಗಡೆ ಕಡವೆ ಮಾತನಾಡಿದರು.

ಪಟ್ಟಣ ಪಂಚಾಯಿತಿ ಉಪಾಧ್ಯಕ್ಷೆ ಶ್ಯಾಮಿಲಿ ಪಾಟಣಕರ್, ನಿರ್ದೇಶಕರಾದ ಸುಬ್ರಾಯ ಭಟ್ಟ, ತಿಮ್ಮಣ್ಣ ಭಟ್ಟ, ಪ್ರಧಾನ ವ್ಯವಸ್ಥಾಪಕ ಎಂ.ಎಸ್.ಹೆಗಡೆ, ಅಪ್ಪು ಆಚಾರಿ, ಸಂತೋಷ ನಾಯ್ಕ, ಸುಜಾತಾ ಹೆಬ್ಬಾರ್ ಉಪಸ್ಥಿತರಿದ್ದರು.

ಕಟ್ಟಡದ ಗುತ್ತಿಗೆದಾರ ಎಸ್.ವಿ.ಭಟ್ ಹಾಗೂ ತೆರಿಗೆ ಸಲಹೆಗಾರ ವಿಘ್ನೇಶ್ವರ ಗಾಂವ್ಕರ್ ಅವರನ್ನು ಶ್ರೀಗಳು ಸನ್ಮಾನಿಸಿದರು. ಸಂಸ್ಥೆಯ ಅಧ್ಯಕ್ಷ ನಾಗರಾಜ ಕವಡಿಕೆರೆ ಸ್ವಾಗತಿಸಿದರು. ಸಂಘದ ನಿರ್ದೇಶಕ ಆರ್.ಎಸ್. ಭಟ್ ವಂದಿಸಿದರು.